**ದಿನಾಂಕ : 02-07-2022 ರಂದು ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು**

---

**ಪಾಟೀ ಸವಾಲು ಶ್ರೀ.ಕೆ.ಕೆ.ವಿ. ವಕೀಲರಿಂದ:-**

ನಾನು ಇತ್ತಿಚೇಗೆ ಹಾಜರುಪಡಿಸಿರುವಂತಹ ದಾಖಲಾತಿಗಳಲ್ಲಿ 2016-17 ರಲ್ಲಿ ಆಸ್ತಿಯ ಕರವನ್ನು ತುಂಬಿಕೊಂಡು ಬಂದಿರುತ್ತೇನೆ ಎಂದರೆ ಅನಿವಾರ್ಯ ಕಾರ್ಯಗಳಿಂದ ಕಟ್ಟಿರುವುದಿಲ್ಲ. 2002 ರವರೆಗೆ ಕರವನ್ನು ತುಂಬಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಈ ವಿಷಯವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-10 ರ ಹಿಂಬರವನ್ನು ನೀಡುವಾಗ ಪುರಸಬೆಯ ಮುಖ್ಯಾಧಿಕಾರಿ ನಿಂಗಣ್ಣ ಅಂತಾ ಇದ್ದರು. ಸೆಕ್ಷನ್ ಕ್ಲರ್ಕ ಯಾರಿದ್ದರು ಎಂದು ಹೇಳಲು ಬರುವುದಿಲ್ಲ. ಆಗ ಶಿವಲಿಂಗ ಅಂತಾ ಕ್ಲರ್ಕ ಅಂತಾ ಇದ್ದ ಎಂದರೆ ಸರಿ. ಮುಖ್ಯಾಧಿಕಾರಿಯಾಗಿ ಗುಂಡಪ್ಪ ಅಂತಾ ಇದ್ದರು ಎಂದರೆ ಸರಿ. ಶಿವಲಿಂಗ ಖೊಟ್ಟಿ ದಾಖಲಾತಿಗಳನ್ನು ಮಾಡುವುದರಿಲ್ಲಿ ನಿಸ್ಸಿಮಾ ಎಂದರೆ ಸರಿಯಲ್ಲ. ಶಿವಲಿಂಗನ ಬಗ್ಗೆ ಗೊತ್ತಿರುವುದಿಲ್ಲ. ಅವನು ಈಗ ಸೇವೆಯಿಂದ ವಜಾಗೊಳಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾವು ಶಿವಲಿಂಗ ಮತ್ತು ಗುಂಡಪ್ಪ ಇಬ್ಬರ ಜೊತೆ ಸೇರಿಕೊಂಡು ದಾಖಲಾತಿಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-10 ರಿಂದ 12 ದಾಖಲಾತಿಗಳನ್ನು ಯಾವುದೇ ವಿಚಾರಣೆ ಮಾಡದೇ ಒದಗಿಸಿರುತ್ತಾರೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ.ಕೇ. ಸರಿ ಇದೆ

**ಸಹಿ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.,ಲಿಂಗಸುಗೂರು